ಸಾಗಿಸುವುದು ಅಸಾಧ್ಯವೆನಿಸಿತು. ಆಗ ಅವರು ವಿಧಿವತ್ತಾಗಿ ಬೇರೆಯಾಗುವ ಕಾರ್ಯ ಕೈಗೊಂಡರು. ನ್ಯಾಯಾಲಯದಲ್ಲಿ ಅಪ್ಪ 'ನೀತಿಗೆಟ್ಟವರು' ಎಂದು ಸಾಬೀತಾದರು. ಆದರೆ ವಿಚ್ಛೇದನಕ್ಕೆ ಬದಲಾಗಿ ಸಾಮಾಜಿಕ ಪ್ರತ್ಯೇಕತೆಯನ್ನು ಒಪ್ಪಿಕೊಂಡ ನಂತರವೂ ಅಮ್ಮ 'ಬಿಟ್ಟವಳು' ಎಂದೇ ಕರೆಯಲ್ಪಟ್ಟರು. ಸಮಾಜ ಅವರನ್ನು 'ಪತಿಯಿಂದ ತ್ಯಜಿಸಲ್ಪಟ್ಟ ಹೆಂಗಸು' ಎಂದು ತಿಳಿಯಿತು. ಮಹಿಳೆ ಮತ್ತು ಪುರುಷನ ನಡುವಿನ ವಿಷಯದಲ್ಲಿ ಮಹಿಳೆಯನ್ನೇ ದೋಷಿ ಎಂದು ತಿಳಿಯಲಾಗುತ್ತದೆ, ಅದೂ ವಿಶೇಷವಾಗಿ ಚಾರಿತ್ರ್ಯದ ಪ್ರಶ್ನೆ ಬಂದಾಗ. ಪುರುಷ 'ಬಿಡಲ್ಪಟ್ಟಾಗ' ಸಹ 'ಬಿಡಲ್ಪಟ್ಟವನು' ಎಂದು ಹೇಳಿಸಿಕೊಳ್ಳುವುದಿಲ್ಲ. ಪರಿತ್ಯಕ್ತನಾದ ಪುರುಷನ ಮೇಲೆ ಅನೇಕ ತಂದೆತಾಯಿಯರ ಕಣ್ಣು ಬಿದ್ದಿರುತ್ತದೆ. ಏಕೆಂದರೆ ಅವರು ತಮ್ಮ ಸಚ್ಚಾರಿತ್ರ್ಯ ಹೆಣ್ಣು ಮಕ್ಕಳ ವಿವಾಹವನ್ನು ಅವನೊಂದಿಗೆ ಮಾಡಲು ಬಯಸುತ್ತಾರೆ. ಅದೇ ಪರಿತ್ಯಕ್ತ ಮಹಿಳೆಯನ್ನು ಜನ ಭೋಗಿಸಲ್ಪಟ್ಟ ಹೆಣ್ಣೆಂದು ನೋಡಿ, ಅವಳನ್ನು ಭೋಗದ ದೃಷ್ಟಿಯಿಂದ ನೋಡಲಾರಂಭಿಸುತ್ತಾರೆ. ಯಾರು ಆ ಭೋಗಿಸಲ್ಪಟ್ಟ, ಪರಿತ್ಯಕ್ತ ಮಹಿಳೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳುವನೋ, ಅವನು ಅಂಥ ಹೆಣ್ಣಿನ ಬಗ್ಗೆ 'ಕೃಪೆ' ಅಥವಾ 'ಅನುಗ್ರಹ'ವನ್ನು ತೋರುತ್ತಾನೆ.

ನಮ್ಮ ಹೊಸ ಮನೆಯ ಒಡತಿ ನನಗೆ, 'ಸುಗಂಧಾರವರೇ, ನೀವೇಕೆ ರಿತಿಕ್‌ರನ್ನು ಮದುವೆ ಮಾಡಿಕೊಳ್ಳುತ್ತಿಲ್ಲ?' ಎಂದಿದ್ದಾಗ, ಸಮಾಜದ ಹಳೆಯ ಕಂದಾಚಾರವನ್ನು ಪೋಷಿಸುವ ಅಮ್ಮನ ಮಾತು, ಅಂದು ಮೊದಲ ಬಾರಿಗೆ ನನಗೆ ನೆನಪಾಯಿತು.

'ನಾನು ಮದುವೆ ಮಾಡಿಕೊಳ್ಳುವ ಅಥವಾ ಮಾಡಿಕೊಳ್ಳದ ಬಗ್ಗೆ ನೀವೇಕೆ ಚಿಂತಿಸುತ್ತಿದ್ದೀರ? ನಿಮಗೆ ನಾನು ಸಮಯಕ್ಕೆ ಸರಿಯಾಗಿ ಬಾಡಿಗೆಯನ್ನು ಕೊಡ್ತಿದ್ದೇನಲ್ಲ?' ನಾನು ಸಹಜವಾಗಿಯೇ ಹೇಳಿದ್ದೆ.

'ಹಾಗಲ್ಲ, ನನಗೇನೂ ತೊಂದ್ರೆ ಇಲ್ಲ. ಆದ್ರೆ ಅಕ್ಕಪಕ್ಕದವರು ಪಿಸುಪಿಸು ಮಾತಾಡಿಕೊಳ್ತಾರೆ', ಮನೆ ಒಡತಿ ಹೇಳಿದ್ದಳು.

'ನೀವು ಅವರ ಬಗ್ಗೆ ಗಮನ ಕೊಡಬೇಡಿ'.

'ಗಮನ ಕೊಡ್ಲೇ ಬೇಕಾಗುತ್ತೆ! ಅವರ ಮಧ್ಯೆಯೇ ಇರಬೇಕಲ್ವ?' ಮನೆ ಒಡತಿ ತಾನು ಕೆಟ್ಟವಳೆಂದು ತೋರಿಸಿಕೊಳ್ಳಲು ಬಯಸುತ್ತಿರಲಿಲ್ಲ. ಅವಳು ವಿದ್ಯಾವಂತೆಯಾಗಿದ್ದಳು. ದಿಲ್ಲಿಯಂಥ ನಗರಗಳಲ್ಲಿದ್ದಳು, ತನ್ನನ್ನು ಆಧುನಿಕ ಮಹಿಳೆಯೆಂದು ತೋರ್ಪಡಿಸಿಕೊಳ್ಳುತ್ತಿದ್ದಳು. ನನ್ನ ನೆರೆಮನೆಯವರು ಮತ್ತು ತನ್ನ ಉಳಿದ ಬಾಡಿಗೆದಾರರಿಗೆ ಸಂದೇಶ ಕೊಡಲು ದಿಲ್ಲಿಯಿಂದ ಬಂದಿದ್ದಳು; ವಿಶೇಷವಾಗಿ ನಮಗೆ ಬೋಧಿಸಲು ಅಥವಾ ಅವಳ ಬೋಧನೆಯನ್ನು ಪಾಲಿಸದಿದ್ದಾಗ ತನ್ನ ಮನೆಯನ್ನು ಬಿಡಿಸಲು ಬಂದಿದ್ದಳು.

'ಸರಿ, ನಾವು ಬೇರೆ ಮನೆಯನ್ನು ಹುಡುಕಿಕೊಳ್ತೇವೆ'. ನಾನು ಮನೆ ಒಡತಿಗೆ ಪೆಟ್ಟು ಕೊಡಲು ಬಯಸಿದೆ, ಆದರೆ ಅವಳು ಹೇಳಿದಳು, 'ಸರಿ, ನಿಮಗೆ ಸರಿ ಕಂಡಂತೆ ಮಾಡಿ'.ನನಗೆ ಅವಳ ಉತ್ತರದಿಂದ ಆಘಾತವಾಯಿತು. ಅವಳು ನಮ್ಮನ್ನು ತನ್ನ ಮನೆಯಿಂದ ಹೋಗಲು ಹೇಳುತ್ತಿದ್ದಳು ಎಂದು ನನಗೆ ದುಃಖವಾಗಲಿಲ್ಲ, ನಮ್ಮ ಅಕ್ಕಪಕ್ಕದವರು ನಮ್ಮ ಬಗ್ಗೆ ಪಿಸುಪಿಸು ಮಾತನಾಡುತ್ತಾರೆ ಅಂತಲೂ ಅಲ್ಲ, ಬದಲಾಗಿ ವಿದ್ಯಾವಂತೆಯಾಗಿದ್ದ ಮನೆ ಒಡತಿ, ದಿಲ್ಲಿ ಅಂಥ ಮಹಾನಗರದಲ್ಲಿ ವಾಸಿಸುತ್ತಿದ್ದಾಗ್ಯೂ, ಸುತ್ತಿ ಬಳಸಿ ತನ್ನ ಮನಸ್ಸಿನಲ್ಲಿ ಇದ್ದುದ್ದನ್ನು ಹೇಳುತ್ತಿದ್ದಳು ಎಂದು ದುಃಖವಾಗುತ್ತಿತ್ತು. ಅಂದರೆ ಓರ್ವ ವಿವಾಹಿತ ಮಹಿಳೆ, ವೈವಾಹಿಕ ಜೀವನದ ಏರಿಳಿತಗಳ ಬಗ್ಗೆ ಚೆನ್ನಾಗಿ ತಿಳಿದಿದ್ದಳು, ಅವಳಿಂದ 'ಲಿವ್ ಇನ್ ರಿಲೇಶನ್' ಜೀವಂತವಾಗಿರುವುದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ.

ನಾನು ರಾತ್ರಿ ಊಟವಾದ ನಂತರ ರಿತಿಕ್‌ಗೆ ಮನೆ ಒಡತಿಯ ಅಭಿಪ್ರಾಯವನ್ನು ತಿಳಿಸಿ, ಬೇರೆ ಮನೆಯೊಂದನ್ನು ಹುಡುಕಲು ಆಗ್ರಹಿಸಿದೆ.

'ಮನೆ ಸಿಗೋದು ಅಷ್ಟು ಸುಲಭವಲ್ಲ, ಕೆಲವು ದಿನ ಸಂಭಾಳಿಸು' ಎಂದಿದ್ದ ರಿತಿಕ್.

ಮರುದಿನದಿಂದ ಬೇರೆ ಮನೆಯನ್ನು ಹುಡುಕಲು ಆರಂಭಿಸಿದ್ದೆ. ನನ್ನ ಕಚೇರಿಯ ಕೆಲವು ಸಿಬ್ಬಂದಿ ಮತ್ತೊಮ್ಮೆ ಹೊಸ ಮನೆಯನ್ನು ಹುಡುಕುವಲ್ಲಿ ಸಹಾಯ ಮಾಡಿದರು. ಆಗ ಅವರಿಗೆ, ನಾನು ಶೀಘ್ರವೇ ರಿತಿಕ್‌ನನ್ನು ಮದುವೆಯಾಗುತ್ತೇನೆ ಎಂಬ ವಿಶ್ವಾಸವಿತ್ತು. ಅವರು ತಮ್ಮ ವಿಶ್ವಾಸವನ್ನು ನನ್ನೆದುರು ವ್ಯಕ್ತಪಡಿಸಿದರು. ನಾನು ನಕ್ಕು ಅಲ್ಲಗಳೆದೆ. ಹೊಸ ಮನೆಯನ್ನು ಹುಡುಕಲು ನನಗೆ ಅವರ ಸಹಾಯದ ಅವಶ್ಯಕತೆಯಿತ್ತು. ನಮ್ಮಿಬ್ಬರ ಕಚೇರಿಗಳಿಂದ ದೂರದಲ್ಲಿದ್ದ ಜಬಲಪುರ ನಗರದ ಇನ್ನೊಂದು ತುದಿಯಲ್ಲಿ ದಾಮೋಹನಾಕಾದ ಬಳಿ ಮನೆಯೊಂದಿತ್ತು. ಮನೆ ದೂರವಿರುವ ಬಗ್ಗೆ ರಿತಿಕ್ ರೇಗಿದ್ದ.

'ನನ್ನೊಂದಿಗಿದ್ದು ಪಶ್ಚಾತ್ತಾಪಪಡ್ತಿಲ್ಲ ತಾನೇ?' ರಿತಿಕ್‌ನನ್ನು ಕೇಳಿದ್ದೆ.

'ಇಲ್ವಲ್ಲ' ರಿತಿಕ್‌ನ ಉತ್ತರ ನಕಾರಾತ್ಮಕವಾಗಿತ್ತು. ಆದರೆ ನಾನೇಕೋ ನಿರುತ್ಸಾಹಗೊಂಡೆ. ರಿತಿಕ್ ಬೇರೇನೋ ಹೇಳಲು ಬಯಸುತ್ತಿದ್ದಾನೆಂದು ಅನ್ನಿಸಿತು. ಇದನ್ನು ನಾನು ನನ್ನ ಮನಸ್ಸಿನ ಭ್ರಮೆಯೆಂದು ತಿಳಿದೆ; ತಲೆ ಕೊಡವಿ ನನ್ನ ಬೇಸರವನ್ನು ದೂರ ಮಾಡಿಕೊಳ್ಳಲು ಪ್ರಯತ್ನಿಸಿದೆ.

ದಿಲ್ಲಿಯ ಆ ಮನೆ ಒಡತಿ ಅಹಂಕಾರದಿಂದ ಹೇಳಿದ್ದಳು, 'ದಿಲ್ಲಿಯಲ್ಲೂ ನಿಮ್ಮ ಹಾಗೆಯೇ ಮದುವೆಯಾಗದೆ ಇರುವವರಿದ್ದಾರೆ, ಆದರೆ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಸಹ ನಮ್ಮ ಮನೆಗೆ ಜೋಡಿಯೊಂದು ಮನೆಯನ್ನು ಹುಡುಕುತ್ತಾ ಬಂದಿತ್ತು. ತಾವು ಒಟ್ಟಿಗಿದ್ದು ಹಣವನ್ನು ಉಳಿತಾಯ ಮಾಡಲು ಬಯಸುತ್ತೇವೆ ಎಂಬುದು ಅವರ ಹೇಳಿಕೆಯಾಗಿತ್ತು. ಇದೆಂಥ ವಿಚಾರ! ಹಣ ಉಳಿಸಲು ಮದುವೆಯಾಗದೆ ಜೊತೆಯಲ್ಲಿರುವುದು, ಜೊತೆಯಲ್ಲಿ ಮಲಗುವುದು, ನಂತರ ಬೇಕಾದಾಗ ಬೇರೆ ಬೇರೆ ಮಾರ್ಗವನ್ನು ಹಿಡಿಯುವುದು. ಎಂಥ ಕೊಳಕು ವಿಚಾರ! ನನ್ನ 'ಇವರಿಗೆ' ಈ ಕಲ್ಚರ್ ಸ್ವಲ್ಪವೂ ಇಷ್ಟವಿಲ್ಲ, ನಿಮಗೆ ಇಲ್ಲಿ ಇವರು ಹೇಗೆ ಮನೆಯನ್ನು ಕೊಟ್ಟರೋ, ಗೊತ್ತಿಲ್ಲ!

'ಕಲ್ಚರ್', ನಮ್ಮ ಕಲ್ಚರ್ ಏನು? ಹೆಣ್ಣನ್ನು ವೇಶ್ಯೆಯಾಗಿಟ್ಟುಕೊಂಡರೆ ಕಲ್ಚರ್‌ಗೆ ವಿರುದ್ಧವಲ್ಲ, ಒಂದು ವೇಳೆ ಹೆಣ್ಣು ತನ್ನ ಸಂಪೂರ್ಣ ಅಧಿಕಾರದೊಂದಿಗೆ, ಸ್ವೇಚ್ಛೆಯಿಂದ ಪುರುಷನೊಂದಿಗಿದ್ದರೆ, ಅದು ಕಲ್ಚರ್‌ಗೆ ವಿರುದ್ಧವೇ? ಓಹ್! ಎಷ್ಟು ದ್ವಿಮುಖತನ!

ನನಗೆ ನನ್ನ ಬೆಂಗಳೂರು ಪ್ರವಾಸದ ನೆನಪಾಯಿತು. ನಾನು ವಿಭಾಗದ ಸೆಮಿನಾರಿಗೆ ಹೋಗುತ್ತಿದ್ದೆ. ರೈಲಿನಲ್ಲಿ ನನ್ನ ಬರ್ಥ್ ಎದುರಿಗೆ ಮತ್ತು ಮೇಲಿನ ಬರ್ಥ್‌ನಲ್ಲಿ ಮೂವರು ಹುಡುಗಿಯರಿದ್ದರು. ಮೂವರೊಂದಿಗೆ ನನ್ನ ಪರಿಚಯವಾಯಿತು, ಮಾತುಕತೆ ಸಹ ಆರಂಭವಾಯಿತು. ದೀರ್ಘ ಪ್ರಯಾಣವಾಗಿದ್ದು, ನಾವು ಒಟ್ಟಿಗೆ ಕಾಲವನ್ನು ಕಳೆಯಬೇಕಿತ್ತು. ನಮ್ಮ ನಾಲ್ವರಲ್ಲಿ ಗೆಳೆತನವಾಯಿತು. ಆ ಮೂವರು ವಯಸ್ಸಿನಲ್ಲಿ ನನಗಿಂತ ಚಿಕ್ಕವರಾಗಿದ್ದರು. ಅವರು ಕಾಲೇಜಿನ 'ಕ್ಯಾಂಪಸ್ ಸೆಲೆಕ್ಷನ್'ನಲ್ಲಿ ಒಂದು ಬಹುರಾಷ್ಟ್ರೀಯ ಎಲೆಕ್ಟ್ರಾನಿಕ್ ಕಂಪನಿಗೆ ಆಯ್ಕೆಯಾಗಿದ್ದರು. ಅವರು ಬೇರೆ ಬೇರೆ ನಗರದವರಾಗಿದ್ದರು. ಆದರೆ ಅವರು ರಾಜಸ್ಥಾನದ ಕೋಟಾ ನಗರದಲ್ಲಿ ಕೋಚಿಂಗ್ ಸಮಯದಲ್ಲಿ ಒಂದೇ ವಿದ್ಯಾರ್ಥಿನಿ ನಿಲಯದಲ್ಲಿದ್ದದ್ದರಿಂದ ಅವರು ಗೆಳತಿಯರಾಗಿದ್ದರು.

'ನಿಮ್ಮ ಜೊತೆಗೆ ಬೇರೆ ಯಾರಿದ್ದಾರೆ?' ನಾನು ಅವರ ಪೋಷಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಳಿದ್ದೆ.

'ಯಾರಿಲ್ಲ, ನಾವು ಮೂವರಷ್ಟೆ'

'ಈ ಮೊದಲೂ ಬೆಂಗಳೂರಿಗೆ ಹೋಗಿದ್ದೀರ?'

'ಇಲ್ಲ, ಮೊದಲ ಬಾರಿಗೆ ಹೋಗ್ತಿದ್ದೇವೆ'

